ಸಜದಸ್ಯರಿಗೆ ಉತ್ತರವನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

ವಿಷಯ:- ದಾಂಡೇಲಿಯ ವೆಸ್ಪ್ ಕೋಸ್ಪ್ ಪೇಪರ್ ಮಿಲ್ಲಿನಲ್ಲಿ ಉಂಟಾಗುವ ಜಲ ಹಾಗೂ ವಾಯು ಮಾಲಿನ್ಯದ ಬಗ್ಗೆ.

ಶ್ರೀ ಪ್ರಭಾಕರ್. ಎಸ್. ರಾಣೆ (ಕಾರವಾರ):- ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ವೆಸ್ಪ್ ಕೋಸ್ಪ್ ಪೇಪರ್ ಮಿಲ್ಲಿನ ನಿರುಪಯುಕ್ತ ಬೂದಿ(ಸಿಂದರ್)ಯನ್ನು ಲಾಭಕ್ಕಾಗಿ ಮಾರುವ ದೃಷ್ಟಿಯಿಂದ ದಾಸ್ತಾನು ಮಾಡುವುದು ವಾಡಿಕೆ. ಇದನ್ನು ಜನದಟ್ಟಣೆಯ ಸ್ಥಳವಾದ ಮತ್ತು ಸಾವಿರಾರು ವಿದ್ಯಾರ್ಥಿಗಳು ಕಲಿಯುತ್ತಿರುವ ಹಿಂದಿ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜ್ ಆವರಣದ ಬಯಲಿನಲ್ಲಿ ದಾಸ್ತಾನು ಮಾಡಿದ್ದಾರೆ. ಈ ಮೈದಾನದ ಸುತ್ತಮುತ್ತಲೂ ನಿರ್ಮಲ್ ನಗರ, ಎಸ್‌ಆರ್‌ಟಿ, ಟಿಆರ್‌ಟಿ ಮತ್ತು ಜನತಾ ಕಾಲೋನಿ ಮುಂತಾದ ಜನನಿಭಿಡ ಪ್ರದೇಶವಾಗಿರುತ್ತದೆ. ಮೇಲ್ಕಾಣಿಸಿದ ಸಿಂದರ್ ಮೇಲಿನ ಬೂದಿಯನ್ನು ಗಾಳಿಗೆ ಹರಡಿ ಈ ಎಲ್ಲ ಜನರ ಮೂಗು ಗಂಟಲುಗಳಲ್ಲಿ ಹೋಗುತ್ತದೆ. ಇದರ ಸೇವನೆಯಿಂದ ಸೆಲ್‌ಮಾಸ್ಕಾನಿಸಿಸ್ ಎಂಬ ರೋಗವು ಬರುತ್ತದೆ. ಈ ರೋಗದಿಂದ ಕರುಳಿನ ಗಂಟೆಗೆ ಟಿ.ಬಿ. ಮತ್ತು ಕ್ಯಾನ್ಸರ್‌ಗಳು ಬರುತ್ತವೆ. ಆದ ಕಾರಣ ಕೂಡಲೇ ಈ ಬೂದಿಯನ್ನು (ಸಿಂದರ್) ದಾಸ್ತಾನನ್ನು ಊರ ಹೊರಗಡೆ ಮಾಡುವಂತೆ ಸಾರ್ವಜನಿಕರು ದೂರು ನೀಡಿದ್ದರೂ ಸಹ ಕಾರ್ಖಾನೆಯವರು ಬೂದಿಯನ್ನು ದೂರ ಸಾಗಿಸಲು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಈ ಕಾರ್ಖಾನೆಯಿಂದ ಜಲ ಹಾಗೂ ವಾಯು ಮಾಲಿನ್ಯ ವಿಪರೀತವಾಗಿ ಜನ ತೊಂದರೆ ಅನುಭವಿಸುತ್ತಿದ್ದಾರೆ. ಆದುದರಿಂದ ಸದರಿ ವಿಷಯವನ್ನು ಪರಿಸರ ಮಾಲಿನ್ಯ ಸಚಿವರ ಗಮನಕ್ಕೆ ತಂದು ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಕೋರುತ್ತೇನೆ.

(ಶ್ರೀ ಜಿ.ಎಸ್.ಶಿವನಂಜಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬ್ಲೇಷಿಯಸ್ ಡಿಸೌಜ (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ವಿಜ್ಞಾನ ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಖಾತೆಯ ಸಚಿವರ ಪರವಾಗಿ ಈ ಹೇಳಿಕೆ ಮಾಡಲು ತಮ್ಮ ಅನುಮತಿ ಕೋರುತ್ತೇನೆ.

ಮೆ: ವೆಸ್ಪ್ ಕೋಸ್ಪ್ ಪೇಪರ್ ಮಿಲ್ಸ್, ಲಿ. ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ ಈ ಕಾರ್ಖಾನೆಯು ಬಾಯ್ಲರ್‌ನಿಂದ ಹೊರ ಬರುವ ವ್ಯರ್ಥವಾದ ಬೂದಿಯನ್ನು ಜನವಸತಿ ಪ್ರದೇಶಗಳ ಮಧ್ಯೆ ಇರುವ ಆವರಣದ ಮೈದಾನದಲ್ಲಿ ಶೇಖರಿಸಿದ್ದಾರೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೂದಿಯನ್ನು ಆ ಸ್ಥಳದಲ್ಲಿ ಶೇಖರಿಸಿರುವುದನ್ನು ಆಕ್ಷೇಪಿಸಿತು. ಇದರಿಂದಾಗಿ ಕಾರ್ಖಾನೆಯು ನಿರುಪಯೋಗಿ ಗಣಿಯಲ್ಲಿ ಈ ಬೂದಿಯನ್ನು ತುಂಬುವುದಕ್ಕಾಗಿ ಅನುಮತಿ ನೀಡಬೇಕೆಂದು ಸರ್ಕಾರವನ್ನು ಕೋರಿತ್ತು. ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರಿ ಆಜ್ಞೆ ಸಂಖ್ಯೆ: ಎ ಹೆಚ್ ಎಫ್ ಎಫ್: 31: ಎಫ್ ಎಫ್ ಎಂ 91, ಬೆಂಗಳೂರು, ದಿನಾಂಕ 13-9-91ರನ್ವಯ ಹಳಿಯಾಳ ವಿಭಾಗ, ವರ್ನಾಳಿ ರೇಂಜ್, ಪ್ರಧಾನ ಉಪವಿಭಾಗದ ಎಸ್ ಬಿ ಸಂಖ್ಯೆ 24ರಲ್ಲಿ ಇರುವ ನಿರುಪಯೋಗಿ ಗಣಿಯಲ್ಲಿ ವ್ಯರ್ಥವಾದ ಬೂದಿಯನ್ನು ತುಂಬಲು ಅನುಮತಿ ನೀಡಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೂದಿಯನ್ನು ಮೇಲೆ ತಿಳಿಸಿದ ನಿರುಪಯೋಗಿ ಗಣಿಯಲ್ಲಿ ತುಂಬಬೇಕೆಂದು ಆದೇಶಿಸಿದೆ. ಆದರೆ ಇದರ ಜೊತೆಗೆ ಜಲಮಾಲಿನ್ಯ ಕೂಡಾ ಕಂಡುಬಂದಿದ್ದು, ಈ ಎಲ್ಲಾ ವಿಷಯಗಳ ಬಗ್ಗೆ ವಿವರವಾಗಿ ಪರಿಶೀಲಿಸಲು ಏಪ್ರಿಲ್ ಮೊದಲನೇ ವಾರದಲ್ಲಿ ಖುದ್ದಾಗಿ ಅಲ್ಲಿಗೆ ಭೇಟಿ ನೀಡಲು ಉದ್ದೇಶಿಸಿದ್ದೇನೆ. ಕಾರ್ಖಾನೆಯು ಉತ್ಪತ್ತಿ ಮಾಡುವ ಅಗಾಧ ಜೈವಿಕ ಕೊಳೆಯನ್ನು ಹರಿಯುವ ನದಿಯಲ್ಲಿ ಪರಂಪರೆಯಾಗಿ ಬಿಟ್ಟು, ನದಿಯ ನೀರನ್ನು ಮಲಿನ ಮಾಡುವುದಲ್ಲದೆ, ಜೀವರಾಶಿಗಳಿಗೆ ಕುತ್ತನ್ನು ತರುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಇದು ಅಪರಾಧವೇ ಸರಿ. ಪರಿಸರ ಮತ್ತು ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಣ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಂಡು, ಕಾರ್ಖಾನೆಯ ಸ್ವಾಧೀನ ಹೊಂದಿರುವವರನ್ನು

ಶಿಕ್ಷೆಗೆ ಗುರಿಪಡಿಸಲಾಗುವುದು.

ವಿತ್ತೀಯ ಕಾರ್ಯಕಲಾಪ

1992-93 ನೇ ಸಾಲಿನ ಅನುದಾನ ಬೇಡಿಕೆಗಳ ಮಂಡಜನೆ ಹಾಗೂ ಚರ್ಚೆ

ಅಭಯಾಚನೆ ಕ್ರಮಾಂಕ 43-ಲೋಕೋಪಯೋಗಿ ಕಾಮಗಾರಿ

(ನಿರ್ಮಾಣ ಹೊರತು)

ಶ್ರೀ ಬಿ. ಹೆಚ್. ಅಶ್ವತ್ಥರೆಡ್ಡಿ :- (ಲೋಕೋಪಯೋಗಿ ಸಚಿವರು) ಮಾನ್ಯ ಅಧ್ಯಕ್ಷರೆ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೊಪಯೋಗಿ ಕಾಮಗಾರಿಗೆ (ನಿರ್ಮಾಣ ರಹಿತ) ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 124,22,00,000 ರೂಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.

ಅಭಯಾಚನೆ ಕ್ರಮಾಂಕ 44 - ಕಟ್ಟಡಗಳು.

ಶ್ರೀ ಬಿ.ಹೆಚ್.ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,80,87,000ರೂಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 70,66,25,000 ರೂ ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.

ಅಭಯಾಚನೆ ಕ್ರಮಾಂಕ 45 - ರಸ್ತೆಗಳು ಮತ್ತು ಸೇತುವೆಗಳು.

ಶ್ರೀ ಬಿ.ಹೆಚ್.ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 141,35,38,000 ರೂಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 29,48,38,000 ರೂಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಯಾಚನೆ ಕ್ರಮಾಂಕ 46 - ರೇವು ಮತ್ತು ಜಲ ಸಾರಿಗೆ ಸೇವೆಗಳು

ಶ್ರೀ ಎಂ.ರಾಮಪ್ಪ:- (ಇಂಧನ ಖಾತೆಯ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,00,11,000ರೂಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,50,00,000 ರೂಗಳಿಗಿಂತ ಮೀರಿದ ಮೋತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಯಾಚನೆ ಕ್ರಮಾಂಕ 33 - ಸಣ್ಣ ನೀರಾವರಿ

ಶ್ರೀ ಕೆ. ಎನ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 56,47,85,000 ರೂಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,00,23,000 ರೂಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಯಾಚನೆ ಕ್ರಮಾಂಕ 34 - ನೀರಾವರಿ ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ